ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**1161**
ವಿಧಾನ ಪರಿಷತ್ತಿನ ಸದಸ್ಯರ ಹೆಸರು	:	ಶ್ರೀ ಕಾಂತರಾಜ್ (ಬಿಎಂಎಲ್) - (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	17.03.2020
ಉತ್ತರಿಸುವ ಸಚಿವರು	:	ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
(ಅ)	ರಾಜ್ಯ ಸರ್ಕಾರ ಅನ್ನಭಾಗ್ಯ ಯೋಜನೆ ಜಾರಿಗೆಗೊಳಿಸಿದ ಬಳಿಕ ಆಹಾರ ಭದ್ರತಾ ಕಾಯ್ದೆ ಅನುಷ್ಠಾನವಾಗಿರುವುದರಿಂದ ಕಳೆದ 3 ವರ್ಷಗಳಿಂದ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬಂದಿರುವ ಅನುದಾನವೆಷ್ಟು; (ವಿವರ ನೀಡುವುದು)	ಅನ್ನಭಾಗ್ಯ ಯೋಜನೆಗೆ ಕೇಂದ್ರ ಸರ್ಕಾರದಿಂದ ಯಾವುದೇ ಅನುದಾನ ಒದಗಿಸಲಾಗುತ್ತಿಲ್ಲ. ಕೇಂದ್ರ ಸರ್ಕಾರವು ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಪ್ರತಿ ಕೆ.ಜಿ.ಗೆ ರೂ.3/-ರ ದರದಲ್ಲಿ ಪ್ರತಿ ಮಾಹೆಗೆ 217403ಮೆ.ಟನ್ ಅಕ್ಕಿಯನ್ನು ಒದಗಿಸುತ್ತಿದೆ ಹಾಗೂ ಸದರಿ ಅಕ್ಕಿಯ ಸಾಗಾಣಿಕೆಗೆ ಪ್ರತಿ ಕ್ವಿಂಟಾಲ್‌ಗೆ ರೂ.65 ಮತ್ತು ನ್ಯಾಯಬೆಲೆ ಅಂಗಡಿಗೆ ನೀಡುವ ಚಿಲ್ಲರೆ ಲಾಭಾಂಶದ ರೂ.87ರಲ್ಲಿ ಶೇ.50 ರಷ್ಟು ಅನುಧಾನವನ್ನು ನೀಡುತ್ತಿದೆ.
(ಆ)	ಕೇಂದ್ರ ಸರ್ಕಾರದ ಅನುದಾನದ ಜೊತೆಗೆ ರಾಜ್ಯ ಸರ್ಕಾರ ಎಷ್ಟು ಅನುದಾನ ಸೇರಿಸಿ ಅನ್ನಭಾಗ್ಯ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ;	ರಾಜ್ಯ ಸರ್ಕಾರದಿಂದ ಅನ್ನಭಾಗ್ಯ ಯೋಜನೆಗೆ 2019-20ನೇ ಸಾಲಿನಲ್ಲಿ 3859.67 ಕೋಟಿಗಳ ಅನುದಾನವನ್ನು ನೀಡಲಾಗಿದೆ.
(ಇ)	ಕೇಂದ್ರ ಸರ್ಕಾರದಿಂದ ಬರುತ್ತಿರುವ ಅನುದಾನದಿಂದ ರಾಜ್ಯ ಸರ್ಕಾರದ ಬೊಕ್ಕಸದ ಮೇಲೆ ಎಷ್ಟು ಹೊರೆ ತಗ್ಗಿದೆ; (ವಿವರ ನೀಡುವುದು)	ಅನ್ನಭಾಗ್ಯ ಯೋಜನೆಗೆ ಕೇಂದ್ರ ಸರ್ಕಾರದಿಂದ ಯಾವುದೇ ಅನುದಾನ ಒದಗಿಸಲಾಗುತ್ತಿಲ್ಲ. ಕೇಂದ್ರ ಸರ್ಕಾರವು ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಪ್ರತಿ ಕೆ.ಜಿ.ಗೆ ರೂ.3/-ರ ದರದಲ್ಲಿ ಪ್ರತಿ ಮಾಹೆಗೆ 217403ಮೆ.ಟನ್ ಅಕ್ಕಿಯನ್ನು ಒದಗಿಸುತ್ತಿದೆ ಹಾಗೂ ಸದರಿ ಅಕ್ಕಿಯ ಸಾಗಾಣಿಕೆಗೆ ಪ್ರತಿ ಕ್ವಿಂಟಾಲ್‌ಗೆ ರೂ.65 ಮತ್ತು ನ್ಯಾಯಬೆಲೆ ಅಂಗಡಿಗೆ ನೀಡುವ ಚಿಲ್ಲರೆ ಲಾಭಾಂಶದ ರೂ.87ರಲ್ಲಿ ಶೇ.50 ರಷ್ಟು ಅನುದಾನವನ್ನು ನೀಡುತ್ತಿದೆ.
(ಈ)	ಅನ್ನಭಾಗ್ಯ ಯೋಜನೆಯಡಿ ಅಕ್ಕಿಯನ್ನು ಯಾವ ರಾಜ್ಯದಿಂದ ತರಿಸಲಾಗುತ್ತಿದೆ; ಈ ಅಕ್ಕಿಯ ದರವೆಷ್ಟು; ಸಾಗಾಣಿಕೆ ಇತರ ವೆಚ್ಚವೆಷ್ಟು; (ವಿವರ ನೀಡುವುದು)	ಅನ್ನಭಾಗ್ಯ ಯೋಜನೆಗೆ ಹೊರ ರಾಜ್ಯಗಳಿಂದ ಅಕ್ಕಿಯನ್ನು ಖರೀದಿಸಲಾಗುತ್ತಿಲ್ಲ.

(ಉ)	ಹೊರ ರಾಜ್ಯದಿಂದ ತರಿಸುವ ಅಕ್ಕಿಯನ್ನು ಸಾಗಾಣಿಕೆ ಮಾಡಲು ಯಾವ ಮಾನದಂಡವನ್ನು ಅನುಸರಿಸಿ ಸಾಗಾಣಿಕೆಗಾಗಿ ವಹಿಸಿಕೊಡಲಾಗಿದೆ; ಹಾಗೂ ಅಕ್ಕಿಯನ್ನು ಹಾಲಿ ಸಾಗಾಣಿಕೆ ಮಾಡುತ್ತಿರುವ ಕಂಪನಿ ಏಜೆನ್ಸಿ ಯಾವುದು;	ಹೊರ ರಾಜ್ಯಗಳಿಂದ ಅಕ್ಕಿಯನ್ನು ಖರೀದಿಸಲಾಗುತ್ತಿಲ್ಲ.
(ಊ)	ರಾಜ್ಯದಲ್ಲಿ ಅನ್ನಭಾಗ್ಯ ಯೋಜನೆಗೆ ಸಂಗ್ರಹಿಸುತ್ತಿರುವ ಲೆವಿ ಪ್ರಮಾಣದ ಅಕ್ಕಿಯನ್ನು ಯಾವ ದರದಲ್ಲಿ ಖರೀದಿಸಲಾಗುತ್ತಿದೆ; ಸಂಗ್ರಹಿಸಿದ ಈ ಅಕ್ಕಿಯು ಎಷ್ಟು ತಿಂಗಳಿಗೆ ಸಾಕಾಗುತ್ತದೆ? (ವಿವರವಾದ ಮಾಹಿತಿ ನೀಡುವುದು)	ರಾಜ್ಯದಲ್ಲಿ ಲೆವಿ ಪದ್ಧತಿ ಜಾರಿಯಲ್ಲಿ ಇರುವುದಿಲ್ಲ.

ಸಂಖ್ಯೆ: ಆನಾಸ 15 ಎಫ್‌ಪಿಪಿ 2020 (ಇ-ಆಫೀಸ್)

(ಕೆ.ಗೋಪಾಲಯ್ಯ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ, ಇಲಾಖಾ ಸಚಿವರು.